(ಉ)1. ಸಹಾಯಕ ನಿರ್ದೇಶಕರು:– ಪಶುವೈದ್ಯಾಧಿಕಾರಿಗಳ ವೃಂದದಿಂದ ಸಹಾಯಕ ನಿರ್ದೇಶಕರ ವೃಂದಕ್ಕೆ ಮುಂಬಡ್ತಿ ನೀಡುವ ಸಂದರ್ಭದಲ್ಲಿ ಆದ್ಯತೆ ಮೇಲೆ ತುಂಬಲು ಕ್ರಮ ಕೈಗೊಳ್ಳಲಾಗುವುದು. ಆದಾಗ್ಯೂ ಖಾಲಿ ಖಾಲಿ ಇರುವ ಈ ಹುದ್ದೆಗೆ ಸಹಾಯಕ ನಿರ್ದೇಶಕರೊಬ್ಬರನ್ನು ಅಧಿಕ ಪ್ರಭಾರದಲ್ಲಿಡಲು ವ್ಯವಸ್ಥೆಮಾಡಲಾಗಿದೆ.

2. ಪಶುವೈದ್ಯಾಧಿಕಾರಿಗಳು: ರಾಜ್ಯದಲ್ಲಿ ಪಶುವೈದ್ಯಾಧಿಕಾರಿಗಳ ಹುದ್ದೆಯನ್ನು ವಿಶೇಷ ನೇಮಕಾತಿ ನಿಯಮಗಳಡಿಯಲ್ಲಿ ತುಂಬುವ ಪ್ರಸ್ತಾವನೆ ಪರಿಶೀಲನೆಯಲ್ಲಿದ್ದು, ವಿಶೇಷ ನೇಮಕಾತಿ ನಿಯಮಗಳು ರಚನೆಯಾದ ನಂತರ ಈ 7 ಪಶುವೈದ್ಯಾಧಿಕಾರಿಗಳ ಹುದ್ದೆಗಳನ್ನು ಆದ್ಯತೆಯ ಮೇಲೆ ಭರ್ತಿಮಾಡಲು ಕ್ರಮ ವಹಿಸಲಾಗುವುದು.

3. ಪಶುವೈದ್ಯಕೀಯ ಪರೀಕ್ಷಕರು:– ಈ 3 ಖಾಲಿ ಹುದ್ದೆಗಳನ್ನು ಪಶುವೈದ್ಯಕೀಯ ಸಹಾಯಕರ ವೃಂದದ ಹುದ್ದೆಯಿಂದ ಮುಂಬಡ್ತಿ ನೀಡುವಾಗ ಆದ್ಯತೆಯ ಮೇಲೆ ಭರ್ತಿ ಮಾಡಲು ಕ್ರಮವಹಿಸಲಾಗುವುದು.

4. ಪಶುವೈದ್ಯ ಸಹಾಯಕರು: ಈ 2 ಖಾಲಿ ಹುದ್ದೆಗಳನ್ನು ಡಿ– ದರ್ಜೆ ನೌಕರರ ಹುದ್ದೆಯಿಂದ ಮುಂಬಡ್ತಿ ನೀಡುವಾಗ ಆಧ್ಯತೆಯ ಮೇಲೆ ಭರ್ತಿ ಮಾಡಲು ಕ್ರಮ ವಹಿಸಲಾಗುವುದು.

5. ಡಿ.–ದರ್ಜೆ– ನೌಕರರು:– ನೇರ ನೇಮಕಾತಿ ಹಾಗೂ ಅನುಕಂಪಾರ್ಥ ಆಧಾರದ ಮೇಲೆ ಭರ್ತಿ ಮಾಡುವಾಗ ಆದ್ಯತೆ ಮೇರೆಗೆ ತುಂಬಲು ಕ್ರಮವಹಿಸಲಾಗುವುದು ಹಾಗೂ ಅವಶ್ಯವಿರುವ ಕಡೆ ಹೊರಗುತ್ತಿಗೆ ಆಧಾರದ ಮೇಲೆ ಡಿ–ದರ್ಜೆ– ನೌಕರರ ಕೆಲಸ ನಿರ್ವಹಿಸಲಾಗುವುದು

ಊ) ಮೇಲೆ ತಿಳಿಸಿರುವಂತೆ ಕ್ರಮವಹಿಸಲಾಗುವುದು.

ಬೀದರ್ ಜಿಲ್ಲಾ ಆಸ್ಪತ್ರೆಯ ಮೂಲಭೂತ ಸೌಕರ್ಯಗಳು

273 (880) ಶ್ರೀ ರಹೀಂ ಖಾನ್ (ಬೀದರ್) :– ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ಬೀದರ್ ನಗರದ ಜಿಲ್ಲಾ ಆಸ್ಪತ್ರೆಯಲ್ಲಿ ಮೂಲಭೂತ ಸೌಕರ್ಯ ಇಲ್ಲದಿರುವುದರಿಂದ ರೋಗಿಗಳಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಬಂದಿದ್ದರೆ, ಆಸ್ಪತ್ರೆಯಲ್ಲಿ ಸಿ.ಟಿ. ಸ್ಕ್ಯಾನ್ ಹಾಗು ಇನ್ನಿತರ ಮೂಲ ಸೌಲಭ್ಯಗಳು ಇಲ್ಲಿಯ ಬಡ ರೋಗಿಗಳಿಗೆ ಸಿಗುವಂತೆ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು;

(ವಿವರ ನೀಡುವುದು)

(ಇ) ಜಿಲ್ಲಾ ಆಸ್ಪತ್ರೆಗೆ 2008 ರಿಂದ ಇಲ್ಲಿಯವರೆಗೆ ಯಾವ ಯಾವ ಮೂಲಭೂತ ಸೌಕರ್ಯಗಳಿಗೆ ಅನುದಾನ ಮಂಜೂರು ಮಾಡಲಾಗಿದೆ ? (ಸಂಪೂರ್ಣ ಮಾಹಿತಿ ಒದಗಿಸುವುದು)

ಶ್ರೀ ಎಸ್.ಎ. ರಾಮದಾಸ್ (ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು):–

(ಅ) ಬೀದರ್ ನಗರದ ಜಿಲ್ಲಾ ಆಸ್ಪತ್ರೆಯಲ್ಲಿ ಅಗತ್ಯವಿರುವ ಮೂಲಭೂತ ಸೌಕರ್ಯಗಳು ಇವೆ. ಈಗಾಗಲೇ ಭಾರತೀಯ ವೈದ್ಯಕೀಯ ಪರಿಷತ್‌ನ (MCI) ತಂಡವು ತಪಾಸಣೆ ನಡೆಸಿ ಮೂಲಭೂತ ಸೌಕರ್ಯಗಳು ನಿಯಮಾನುಸಾರ ಇರುವುದರಿಂದ ಬೀದರ್‌ನ ಸರ್ಕಾರಿ ವೈದ್ಯಕೀಯ ಕಾಲೇಜಿಗೆ ಖಾಯಂ ಮಂಜೂರಾತಿ ನೀಡಿರುತ್ತದೆ. ರೋಗಿಗಳ ಅನುಕೂಲಕ್ಕಾಗಿ ಜ್ಯಾಂಡಿಸ್ ಮೀಟರ್, ಎಬಿಜಿ ಯಂತ್ರ ಮತ್ತು ಕ್ಷ–ಕಿರಣ ಯಂತ್ರಗಳನ್ನು ಅಳವಡಿಸಲು ಈಗಾಗಲೇ ಕ್ರಮ ಕೈಗೊಳ್ಳಲಾಗಿದೆ.

(ಆ) ಈ ಆಸ್ಪತ್ರೆಯಲ್ಲಿ ಸಿ.ಟಿ. ಸ್ಕ್ಯಾನ್ ಹಾಗೂ ಇನ್ನಿತರ ಮೂಲ ಸೌಲಭ್ಯಗಳು ಇಲ್ಲಿನ ಬಡರೋಗಿಗಳಿಗೆ ಸಿಗುವಂತೆ ಮಾಡಲು ಹೊಸದಾಗಿ 05 ಕ್ಷ–ಕಿರಣ ಯಂತ್ರಗಳು ಮಂಜೂರಾಗಿದ್ದು, ಕಾರ್ಯಗತವಾಗ ಬೇಕಾಗಿದೆ. ಸಿ.ಟಿ. ಸ್ಕ್ಯಾನ್‌ಗಾಗಿ ಟೆಂಡರ್ ಕರೆಯಲಾಗಿದೆ ಹಾಗು ಜನನಿ ಶಿಶು ಕಾರ್ಯಕ್ರಮದ ಯೋಜನೆಯಡಿಯಲ್ಲಿ ಗರ್ಭಿಣಿ/ ಹೆರಿಗೆಗೆ ಬಂದ ಮಹಿಳೆಯರಿಗೆ ಹಾಗೂ ನವಜಾತ ಶಿಶುಗಳಿಗೆ ಉಚಿತ ಚಿಕಿತ್ಸೆ/ ಪ್ರಯೋಗಾಲಯ/ ರಕ್ತ ಮತ್ತು ಸಾರಿಗೆ ವ್ಯವಸ್ಥೆ ನೀಡಲಾಗುತ್ತಿದೆ. ರೋಗಿಗಳಿಗೆ ಎಲ್ಲಾ ಸೌಲಭ್ಯಗಳನ್ನು ನೀಡಲಾಗುತ್ತಿದೆ. ಯಶಸ್ವಿನಿ ಯೋಜನೆಯನ್ನು ಸಹ ಜಾರಿಗೊಳಿಸಲಾಗಿದೆ.

ಇ) ಜಿಲ್ಲಾ ಆಸ್ಪತ್ರೆಗೆ 2008 ರಿಂದ ಇಲ್ಲಿಯವರೆಗೆ ಮೂಲಭೂತ ಸೌಕರ್ಯಗಳಿಗಾಗಿ ಮಾತ್ರವಲ್ಲದೆ, ಒಟ್ಟಾರೆ ಬಿಡುಗಡೆಯಾಗಿರುವ ಅನುದಾನದ ವಿವರ ಕೆಳಕಂಡಂತಿದೆ.

ವರ್ಷ	ಬಿಡುಗಡೆಯಾದ ಅನುದಾನ	(ರೂ. ಲಕ್ಷಗಳಲ್ಲಿ)
	ಸಿವಿಲ್ ಕಾಮಗಾರಿ	ಉಪಕರಣ
2008–09	1.93	117.80
2009–10	20.60	–
2010–11	41.353	14.5
2011–12	5.74	–
2012–13	2.30	–